ಸಾಯಂಕಾಲ ದೇವರಿಗೆ ತುಪ್ಪದ ದೀಪ ಹಚ್ಚಿಟ್ಟಿದ್ದೂ ಆಯಿತು.

ಆದರೆ ರಾಯರು ತೆಪ್ಪಗಿರದೆ ತಮ್ಮ ಸೆನ್ಸ್ ಆಫ್ ಹ್ಯೂಮರ್ ಜಾಗೃತಗೊಳಿಸಿ 'ಯಾರದೋ ಕೈಯಲ್ಲೇ ಡ್ಯಾನ್ಸ್ ಮಾಡಿಸಿದ ಹಾಗಾಯ್ತು' ಅಂದರು. ಇದು ಇದ್ದಕ್ಕಿದ್ದ ಹಾಗೆ ಅಹಲ್ಯಬಾಯಿಯವರನ್ನ ವ್ಯಗ್ರಗೊಳಿಸಿ ಆಕೆ ಮಾರಿಯ ಅವತಾರ ತಾಳಿ 'ಮುಂಡೇಮಗನೇ, ನನ್ನನ್ನ ಸೂಳೇ ಅಂತೀಯಾ' ಅಂದು ಬಾಗಿಲ ಹಿಂದಿದ್ದ ಮಡಿಕೋಲಿನಲ್ಲಿ ನಾಲ್ಕು ರಾಚಿದರು. ರಾಯರ ಹಾಸ್ಯ ಪ್ರಯೋಗ ಅವತ್ತೇ ಮೊದಲು, ಅವತ್ತೇ ಕಡೆ! ಅವತ್ತಿನಿಂದ ತಮ್ಮ ಪತ್ನಿಯ ಹೊಸ ಅವತಾರ ರಾಯರಿಗೆ ಪರಿಚಯವಾಯಿತು. ಅದೇನೆಂದರೆ ಏನಾದರೂ ಆಕೆ ಕೆಟ್ಟಮೂಡ್‌ನಲ್ಲಿದ್ದು ರಾಯರು ಮಾಡುವ ಏನಾದರೂ ಕೆಲಸ ಅಥವಾ ಮಾತು ಪ್ರಿಯವಾಗದೇ ಇದ್ದರೆ ಆಕೆ ರೌದ್ರಾವತಾರ ತಾಳಿ ರಾಯರಿಗೆ ಮಡಿಕೋಲು ಸೇವೆ ಸಾಂಗೋಪಾಂಗವಾಗಿ ನಡೆಯುವುದು. ಹಾಗೂ ಒಂದು ದಿವಸ ರಾಯರು ಆ ಮಡಿಕೋಲನ್ನ ಅವಸಿಟ್ಟು ಅದು ಮತ್ತೊಂದು ರೀತಿಯ ಆಯಾಮ ತೆರೆದಿತು. ಅಹಲ್ಯಬಾಯಿ ಕೈಯಲ್ಲಿ ಅವತ್ತು ದೋಸೆ ತಿರುಗಿಸುವ ಮಗುಚುವ ಕೈ ಇದ್ದದ್ದು ಆಕೆ ಅದರಲ್ಲೇ ರಾಯರಿಗೆ ಬಡಿದಿದ್ದರು! ಇದು ಕಡೆಗೆ ಯಾವ ಸ್ಥಿತಿಗೆ ಹೋಗಿ ತಲುಪಿತು ಅಂದರೆ ಈ ತರಹದ ಅಸಾಲ್ಟು ವಾರಕ್ಕೊಮ್ಮೆ ಆಗದೇ ಹೋದರೆ ರಾಯರು 'ಏಕೆ ಇನ್ನು ಈ ಸೇವೆ ಆಗಿಲ್ಲವಲ್ಲ ಈ ವಾರ' ಅಂತ ಚಿಂತಿಸುವ ಹಾಗೆಯೂ ಆಯಿತು!

ಶ್ರೀನಿವಾಸರಾಯರ ತಾಯಿ ಶಾರದಮ್ಮನವರು ಇದ್ದದ್ದು ನಂಜನಗೂಡಿನಲ್ಲಿ ಶ್ರೀನಿವಾಸರಾಯರ ಕೊನೆಯ ತಮ್ಮ ವೆಂಕಟರಾಯರ ಮನೆಯಲ್ಲಿ! ಆತನೂ ಪ್ರೈಮರಿ ಸ್ಕೂಲಲ್ಲಿ ಮಾಸ್ತರು – ಕಿತ್ತು ತಿನ್ನುವ ಬಡತನ ಬೇರೆ. ಶ್ರೀನಿವಾಸರಾಯರಿಗೆ ತಮ್ಮ ತಾಯಿ ತಮ್ಮ ಮನೆಗೆ ಬಂದು ಒಂದೆರಡು ವಾರ ಇದ್ದರೆ ತಮ್ಮ ಹೆಂಡತಿ ಸ್ವಲ್ಪವಾದರೂ ಸರಿ ಆಗಬಹುದು, ಮನೇಲಿ ದೊಡ್ಡವರೂ ಅಂತ ಇದ್ದರೆ ಅವರನ್ನ ನೋಡಿ

